**PW_1**

## 1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಚಿತ್ರದುರ್ಗ

### ಸಿ.ಸಿ.1649/2022

| | | |
|---|---|---|
| ಸಾಕ್ಷಿದಾರರ ಹೆಸರು | ಮೀನಾಕ್ಷಿ | PW:1 |
| ತಂದೆಯ ಹೆಸರು | ನಿಂಗಪ್ಪ | CW:1 |
| ವಯಸ್ಸು | 68 ವರ್ಷ | ಪ್ರಮಾಣ ವಚನ ಬೋದಿಸಿದ |
| ಉದ್ಯೋಗ | ಗೃಹಿಣಿ | ದಿನಾಂಕ : 07/12/2024 |
| ವಾಸ | ಜೋಗಿಮಟ್ಟಿ, ಚಿತ್ರದುರ್ಗ | |

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

ಆರೋಪಿತರು ತಮ್ಮ ಹಾಗೂ ತಮ್ಮನ ಹೆಂಡತಿ ಆಗಬೇಕು. ಚಾಸಾ.4 ಮತ್ತು 5 ಅಕ್ಕಂದಿರು. ಚಾಸಾ.6 ಮತ್ತು 7 ಸಂಬಂದಿಕರು. ಜೋಗಿಮಟ್ಟಿ ರೋಡ್ , 4 ನೇ ಕ್ರಾಸ್ ನಲ್ಲಿ ಆರೋಪಿತರು ನನ್ನೊಂದಿಗೆ ಗಲಾಟೆ ಮಾಡಿರುತ್ತಾರೆ. 15.04.2022 ರಂದು ಗಲಾಟೆ ಆಗಿರುತ್ತದೆ. ನಮ್ಮ ಮನೆಯ ಹತ್ತಿರ ಮನೆಗೆ ಸಂಬಂದಿಸಿದಂತೆ ಏನಾದರೂ ರಿಪೇರಿ ಮಾಡಲು ಹೋದಾಗ ಆರೋಪಿತರು ನಮ್ಮ ಜೊತೆ ಗಲಾಟೆ ಮಾಡುತಿದ್ದರು. ತುಂಬಾ ವರ್ಷದಿಂದ ಗಲಾಟೆ ಮಾಡುತಿದ್ದರು. ನಮ್ಮ ಮನೆಯ ಮುಂದೆ ಆರೋಪಿತರು ಬೈಕನ್ನು ನಿಲ್ಲಿಸಿದ್ದರು. ನಾನು ಕಸ ಗುಡಿಸುವಾಗ ಬೈಕನ್ನು ಸ್ವಲ್ಪ ಮುಂದಕ್ಕೆ ಜರುಗಿಸಿ ಅಂತ ಹೇಳಿದ್ದಕ್ಕೆ ಆರೋಪಿತರು ನನ್ನ ಮನೆ ಒಳಗೆ ನುಗ್ಗಿ ಸುಜಾತ, ರವಿಕುಮಾರ ಮತ್ತು ಅವರ ಮಗ ಕೂಡ ನನಗೆ ಹೊಡೆದಿರುತ್ತಾರೆ. ಪೊಲೀಸರಿಗೆ ದೂರು ನೀಡಿರುತ್ತೇನೆ ನಂತರದಲ್ಲಿ ನನ್ನ ಅಕ್ಕಂದಿರು ಬಂದು ಗಲಾಟೆಯನ್ನು ಬಿಡಿಸಿಕೊಂಡಿರುತ್ತಾರೆ ನಂತರ ನನ್ನನ್ನು ಆಸ್ಪತ್ರೆಗೆ ಸೇರಿಸಿರುತ್ತಾರೆ. ಕೆಟ್ಟ ಕೆಟ್ಟ

ಮಾತುಗಳಿಂದ ನನಗೆ ಬೈದಾಡುತ್ತಾರೆ. ನನ್ನ ಅಕ್ಕಂದಿರುಗೂ ಸಹ ಬೈದಾಡುತಿದ್ದರು ಮತ್ತು ಎಡೆದಾಡಿರುತ್ತಾರೆ. ಆಗ ಆರೋಪಿತರ ವಿರುದ್ದ ನಮ್ಮ ಮೇಲೆ ಸಹ ದೂರು ಕೊಟ್ಟಿರುತ್ತಾರೆ ನಾವುಗಳು ಸಹ ಅವರ ಮೇಲೆ ದೂರು ಕೊಟ್ಟಿರುತ್ತೇವೆ. ನಂತರದಲ್ಲಿ ನಾನು ಆಸ್ಪತ್ರೆಯಲ್ಲಿದ್ದಾಗ ಗಲಾಟೆ ಆದ ದಿನದಂದೇ ಪೊಲೀಸರು ನನ್ನ ಹೇಳಿಕೆ ದೂರನ್ನು ಪಡೆದಿರುತ್ತಾರೆ. ನಂತರದಲ್ಲಿ 17.04.2022 ರಂದು ಗಲಾಟೆ ಆದ ಸ್ಥಳದಲ್ಲಿ ನನ್ನ ಅಕ್ಕಂದಿರು ಇದ್ದಾಗ ಪೊಲೀಸರು ಮಹಜರ ಮಾಡಿದರು. ಮಹಜರ ಕಾಲದಲ್ಲಿ ನಾನು ಹಾಜರಿದ್ದು ಜಾಗ ತೋರಿಸಿರುತ್ತೇನೆ. ದೂರನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮಹಜರನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದರಿಂದ ಮಹಜರನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಮಹಜರ ಕಾಲದಲ್ಲಿ ತೆಗೆದ ಬಾವಚಿತ್ರವನ್ನು ಸಾಕ್ಷಿ ಗುರುತಿಸಿದ್ದರಿಂದ ಸದರಿ ಬಾವಚಿತ್ರವನ್ನು ನಿಪಿ.3 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**( ಈ ಹಂತದಲ್ಲಿ ಸ.ಸ. ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು : ಸ.ಸ. ಅಭಿಯೋಜಕರಿಂದ</u>**

ಆರೋಪಿತರು ನನ್ನ ಕೈಹಿಡಿದು ದರನೆ ಎಳೆದು ಕೆಳಗೆ ಬೀಳಿಸಿದರು. ನಂತರ ನಾನು ತೊಟ್ಟಿರುವ ನೈಟಿಯನ್ನು ಹಿಡಿದು ಎಳೆದಾಡಿ ನನ್ನ ತಲೆಕೂದಲನ್ನು ಹಿಡಿದು ಎಳೆದಾಡಿ ಕೈಗಳಿಂದ ನನ್ನ ಎದೆಗೆ ತಲೆಗೆ ಕೆನ್ನೆಗೆ ಕಿವಿಗೆ ಹೊಡೆದಿರುತ್ತಾರೆ ಎಂದರೆ ಸರಿ. ನಂತರ ನನ್ನ ಅಕ್ಕ ರುದ್ರಮ್ಮ ನನಗೆ ಹೊಡೆಯುವುದನ್ನು ಬಿಡಿಸಲು ಬಂದಿದ್ದು ಆಗ 2 ನೇ ಆರೋಪಿ ಕೈಯನ್ನು ಹಿಡಿದು ನನ್ನ ಅಕ್ಕನನ್ನು ಎಳೆದು ಹಾಕಿರುತ್ತಾರೆ. 1 ನೇ ಆರೋಪಿ ಮತ್ತು ಅವರ ಮಗ ಕೂದಲು ಹಿಡಿದುಕೊಂಡು ಎಳೆದಾಡಿ ಕೈಗಳಿಂದ ಎದೆಗೆ ಕಾಲಿಗೆ ಮತ್ತು ಮೈಕೈಗೆ

**PW_1**

ಗುದ್ದಿರುತ್ತಾರೆ. ಆ ಸಮಯದಲ್ಲಿ ನನ್ನ ಇನ್ನೊಬ್ಬ ಅಕ್ಕ ಗಲಾಟೆ ಬಿಡಿಸಲು ಬಂದಾಗ ಅವರಿಗೂ ಸಹ ಆರೋಪಿತರು ನಿಮ್ಮನ್ನು ಸಾಯಿಸಿಬಿಡುತ್ತೇವೆ ಅಂತ ಪ್ರಾಣ ಬೆದರಿಕೆ ಹಾಕಿದರು. ನಾನು ನನ್ನ ಅಕ್ಕ ರುದ್ರಮ್ಮ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆಯನ್ನು ಪಡೆದೆವು ಎಂದರೆ ಸರಿ.

**ಪಾಟೀ ಸವಾಲಿಗೆ ಸಮಯ ಕೋರಿದ್ದು ಯಾವುದೇ ಸಕಾರಣ ಹೇಳಿರುವುದಿಲ್ಲ ಆದ್ದರಿಂದ ಪಾಟೀಸವಾಲು ಇಲ್ಲ ಅಂತ ಪರಿಗಣಿಸಲಾಯಿತು.**

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು**
**ಜೆ ಎಂ ಎಫ್ ಸಿ ನ್ಯಾಯಾಧೀಶರು, ಚಿತ್ರದುರ್ಗ**